## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಮ್/3454/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 5/11/2020.

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ಬಿ.ಐ. ಬಸ್ತವಾಡೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಾಡ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ (2) ಶ್ರೀ ಮಹಾದೇವ ಬಿರಾದಾರ ಪಾಟೀಲ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹುಕ್ಕೇರಿ ತಾಲ್ಲೂಕು ಪಂಚಾಯತ್, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಸರ್ಕಾರಿ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1) ಶ್ರೀ ಯಶವಂತ ಬಿನ್ ಅಪ್ಪಾ ಕದಂ, ಬಾಡ ಗ್ರಾಮ ಮತ್ತು ಅಂಚೆ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಬಿ.ಐ. ಬಸ್ತವಾಡೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಾಡ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ (2) ಶ್ರೀ ಲಕ್ಷ್ಮೀ ನಾರಾಯಣ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಾಡ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ (3) ಮಹಾದೇವ ಬಿರಾದಾರ ಪಾಟೀಲ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹುಕ್ಕೇರಿ ತಾಲ್ಲೂಕು ಪಂಚಾಯತ್, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ಎದುರುದಾರರು 1 ರಿಂದ 3' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಆಪಾದಿಸಿ ಆಸ್ತಿ ನಂ. 72 ಮತ್ತು 87 ರ ಆಸ್ತಿಗಳ

ಅಳತೆಯನ್ನು ಎದುರುದಾರರು ಮಾಡಲು ವಿಳಂಭ ಮಾಡಿರುತ್ತಾರೆ ಎಂದು ದೂರು ಸಲ್ಲಿಸಿರುತ್ತಾರೆ.

ಎದುರುದಾರರ ಆಕ್ಷೇಪಣೆಗಳು:-

2) 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು ಸದರಿ ಆಕ್ಷೇಪಣೆಯಲ್ಲಿ ನಾನು ಗ್ರಾಮ ಪಂಚಾಯತ್ ಬಾಡದಲ್ಲಿ ಪ್ರಭಾರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಈಗಲೂ ಸಹ ಕೆಲಸ ಮಾಡುತ್ತಿದ್ದು ಪಿರ್ಯಾದುದಾರರು ಅವರ ಮಾಲ್ಕೀಯ ಆಸ್ತಿಯಾದ ಬಾಡ ಗ್ರಾಮದ ವಿ.ಪಿ.ಸಿ. ನಂ.72 ನೇದ್ದರ ಬದ್ದಲ್ ಈ ಸ್ವತ್ತು ಉತಾರ ತಯಾರಿಸಲು ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ಪಡೆದುಕೊಂಡು ನಿಯಮಾನುಸಾರವಾಗಿಸದರಿ ಬಾಡ ಗ್ರಾಮದ ವಿ.ಪಿ.ಸಿ. ನಂ. 72 ಮತ್ತು 87ರ ಬದ್ದಲ್ ಸ್ಥಳ ಪರಿಶೀಲನೆ ಮಾಡಿ ಹಾಗೂ ಮೋಜನಿ ಅಧಿಕಾರಿಗಳ ಜೊತೆ ಸ್ಥಳ ಪರಿಶೀಲನೆ ನಡೆಸಿ ಸದರಿ ಆಸ್ತಿಯ ಅಳತೆಯನ್ನು ಮಾಡಿಸಿ ಸದರಿ ಸ್ಥಳದಲ್ಲಿ ಇರುವ ವ್ಯಕ್ತಿಗಳ ಹಾಗೂ ಸದರಿ ಆಸ್ತಿಯ ಮಾಲೀಕರನ್ನು ಹಾಗೂ ಸದರಿ ಆಸ್ತಿಯ ಬದಿಗೆ ಇರುವ ಆಸ್ತಿಗಳ ಮಾಲೀಕರನ್ನು ಕರೆಯಿಸಿ ಸದರಿ ಆಸ್ತಿಗಳ ಬದ್ದಲ್ ವಿಚಾರಣೆ ನಡೆಸಿ ಸದರಿ ಆಸ್ತಿಯ ಚೆಕ್ಕುಬಂದಿಯನ್ನು ನಮೂದಿಸಿ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡು ದಿನಾಂಕ: 11/03/2016 ರಂದು ಇ-ಸ್ವತ್ತು ಉತಾರವನ್ನು ತಯಾರಿಸಿದ್ದು ಇರುತ್ತದೆ. ಸದರಿ ಇ-ಸ್ವತ್ತು ಉತಾರವನ್ನು ತಯಾರಿಸಿ ಮೂಲ ಮಾಲೀಕರಾದ ಪಿರ್ಯಾದುದಾರರಿಗೆ ಕೊಟ್ಟಿದ್ದು ಇರುತ್ತದೆ. ಇದಾದನಂತರ ದಿನಾಂಕ: 27/05/2016 ರಂದು ಸದರಿ ಆಸ್ತಿಯ ಮಾಲೀಕರು ಉಪನೋಂದಣಿ ಅಧಿಕಾರಿಗಳು ಹುಕ್ಕೇರಿ ಇವರಲ್ಲಿ ನೋಂದು ಖರೀದಿ ಪತ್ರ ಮಾಡಿಕೊಟ್ಟಿದ್ದು ಇರುತ್ತದೆ. ತದನಂತರ ಎರಡು ಆಸ್ತಿಗಳ ಖರೀದಿದಾರನ ಹೆಸರುಗಳನ್ನು ದಾಖಲಿಸುವ ಸಲುವಾಗಿ ದಿನಾಂಕ: 04/11/2016 ರಂದು ಅರ್ಜಿ ಸಲ್ಲಿಸಿದ ಪ್ರಕಾರ ಸದರಿ ಎರಡು ಆಸ್ತಿಗಳಿಗೆ ಸಂಬಂಧಿಸಿದಂತೆ ಖರೀದಿದಾರರ ಹೆಸರುಗಳನ್ನು ದಾಖಲಿಸಿ ಉತಾರ ಪೂರೈಸಿದ್ದು ಇರುತ್ತದೆ. ಸದರಿ ಆಸ್ತಿಗಳ ಉತಾರ ಪಡೆದುಕೊಂಡು ಖರೀದಿ ಮಾಡಿಸಿ ಸದರಿ

ಆಸ್ತಿಗಳಿಗೆ ಸಂಬಂಧಿಸಿದಂತೆ ಸದರಿ ಖರೀದಿದಾರರ ಹೆಸರುಗಳನ್ನು ನಮೂದಾದರೂ ಸಹ ಅಲ್ಲಿಯವರೆಗೆ ಸದರಿ ಆಸ್ತಿಗಳ ಉತಾರ ಪಡೆದುಕೊಂಡು ಖರೀದಿ ಮಾಡಿಸಿ ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಸದರಿ ಖರೀದಿದಾರರ ಹೆಸರುಗಳು ನಮೂದು ಆದರೂ ಸಹ ಅಲ್ಲಿಯವರೆಗೆ ಸದರಿ ಆಸ್ತಿಗಳ ಚೆಕ್ಕುಬಂದಿ ತಪ್ಪಾಗಿದ್ದು ಅಂತಾ ತಿಳಿಸಿದ್ದು ಇರುವುದಿಲ್ಲ. ಅದನ್ನು ಅಧಿಕಾರಿಗಳಾದ 2ನೇ ಎದುರುದಾರರಿಗೆ ತಿಳಿಸಿದ ಪ್ರಕಾರ ಸದರಿಯವರು ಸದರಿ ಚೆಕ್ಕುಬಂದಿಯನ್ನು ಸರಿಪಡಿಸಲು ಬರುವುದಿಲ್ಲ ಅಂತಾ ಅವರು ತಮ್ಮ ಮೇಲಾಧಿಕಾರಿಗಳ ಅಪ್ಪಣೆಯನ್ನು ಪಡೆದುಕೊಂಡು ತಿಳಿಸುತ್ತೇನೆಂದು ತಿಳಿಸಿದ್ದು ಇರುತ್ತದೆ. ಹೀಗಿದ್ದರೂ ಸಹ ಸದರಿ ಅರ್ಜಿದಾರರು ಈ ರೀತಿಯ ಖೊಟ್ಟಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ನನ್ನ ಕರ್ತವ್ಯದಲ್ಲಿ ಯಾವುದೇ ಲೋಪದೋಷವನ್ನು ಎಸಗಿದ್ದು ಇರುವುದಿಲ್ಲ. ಸದರಿ ಆಸ್ತಿಗಳ ಬದ್ದಲ್ ಇ-ಸ್ವತ್ತು ಉತಾರ ತಯಾರಿಸುವ ಸಮಯದಲ್ಲಿ ಲಭ್ಯವಿದ್ದ ಎಲ್ಲಾ ಕಾಗದ ಪತ್ರಗಳನ್ನು ಪರಿಶೀಲಿಸಿ ಹಾಗೂ ಸದರಿ ಆಸ್ತಿಗಳ ಮಾಲೀಕರು ಹಾಗೂ ಆಜುಬಾಜೂದಾರರ ಆಸ್ತಿಗಳ ಮಾಲೀಕರ ಹಾಗೂ ಸಾಕ್ಷಿದಾರರನ್ನು ಕೇಳಿಕೊಂಡು ನಿಖರವಾದ ಮಾಹಿತಿ ಪಡೆದುಕೊಂಡು ಇ-ಸ್ವತ್ತು ಉತಾರವನ್ನು ತಯಾರಿಸಿದ್ದು ಇರುತ್ತದೆ ಎಂದು ನಮೂದಿಸಿರುತ್ತಾರೆ.

3) 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು ಸದರಿ ಆಕ್ಷೇಪಣೆಯಲ್ಲಿ ನನಗೆ ಹೆಚ್ಚಿನ ಚಾರ್ಜ ಅಂತಾ ಬಾಡ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ನನ್ನ ಮೇಲಾಧಿಕಾರಿಗಳು ನನಗೆ ಆದೇಶ ಮಾಡಿದ ಪ್ರಕಾರ ನಾನು ದಿನಾಂಕ: 16/12/2016 ರಂದು ಸದರಿ ಗೋಟೂರ ಗ್ರಾಮ ಪಂಚಾಯತಿ ಜೊತೆಗೆ ಬಾಡ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ಚಾರ್ಜ ಪಡೆದುಕೊಂಡಿದ್ದು ಇರುತ್ತದೆ. ಮತ್ತು ಅಲ್ಲಿಂದ ದಿನಾಂಕ: 03/10/2017 ರವರೆಗೆ ನಾನು ಬಾಡ ಪಂಚಾಯತಿಗೆ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು ಇರುತ್ತದೆ. ಪಿರ್ಯಾದುದಾರರು ಆಸ್ತಿಗಳ ಇ-ಸ್ವತ್ತು ಉತಾರವನ್ನು ಪಡೆದುಕೊಂಡು ಸದರಿ ಆಸ್ತಿಗಳನ್ನು ಬೇರೆಯವರಿಗೆ ಖರೀದಿ

ಮಾಡಿಕೊಟ್ಟಿರುತ್ತಾರೆ. ಈಗ ಸದರಿ ಆಸ್ತಿಗಳ ಉತಾರದಲ್ಲಿ ಖರೀದಿದಾರ ಮಾಲೀಕರ ಹೆಸರುಗಳು ದಾಖಲಾಗಿದ್ದು, ಈ ಹಂತದಲ್ಲಿ ಸದರಿ ಚೆಕ್ಕುಬಂದಿಯನ್ನು ತಿದ್ದುಪಡಿ ಮಾಡಲು ಬರುವುದಿಲ್ಲ. ಮತ್ತು ತಿದ್ದುಪಡಿ ಮಾಡುವ ಅಧಿಕಾರವು ನನಗೆ ಇರುವುದಿಲ್ಲ. ನನ್ನ ಮೇಲಾಧಿಕಾರಿಗಳ ಸಲಹೆ ಸೂಚನೆಯನ್ನು ಪಡೆಯುವ ಸಲುವಾಗಿ ದಿನಾಂಕ: 28/07/2017 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಬೆಳಗಾವಿಸ ಇವರಿಗೆ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರಿಯವರು ಇಲ್ಲಿಯವರೆಗೆ ಯಾವುದೇ ರೀತಿಯ ಸೂಚನೆಗಳನ್ನು ನೀಡಿರುವುದಿಲ್ಲ. ಆದಕಾರಣ ನಾನು ನನ್ನ ಅವಧಿಯಲ್ಲಿ ಸದರಿ ಆಸ್ತಿಗಳ ಚೆಕ್ಕುಬಂದಿಯನ್ನು ಬದಲಿಸಿದ್ದು ಇರುವುದಿಲ್ಲ. ಮೇಲಾಧಿಕಾರಿಗಳ ಅಪ್ಪಣೆಯ ಮೇರೆಗೆ ತಿದ್ದುಪಡಿ ಮಾಡಿಕೊಡುವುದಾಗಿ ತಿಳಿಸಿರುತ್ತೇನೆ ಎಂದು ನಮೂದಿಸಿರುತ್ತಾರೆ.

4) 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು ಸದರಿ ಆಕ್ಷೇಪಣೆಯಲ್ಲಿ ಹುಕ್ಕೇರಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುವ ಸಮಯದಲ್ಲಿ ಬಾಡ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳಾದ ವಿ.ಪಿ.ಸಿ. ನಂ. 72 ಹಾಗೂ 87ನೇ ಆಸ್ತಿಗಳ ಬದ್ದಲ್ ಯಶವಂತ ಅಪ್ಪಾ ಕದಮ ಹಾಗೂ ಮೇಘಾ ಯಶವಂತ ಕದಮ ಇವರು ಸದರಿ ಆಸ್ತಿಗಳ ಇ-ಸ್ವತ್ತು ಉತಾರವನ್ನು ತಯಾರಿಸಲು ದಿನಾಂಕ: 06/07/2015 ರಂದು ಅರ್ಜಿ ಸಲ್ಲಿಸಿದ ಪ್ರಕಾರ ಸದರಿ ಗ್ರಾಮದಲ್ಲಿಯ ಆಗಿನ ಗ್ರಾಮಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾದ 1ನೇ ಎದರುದಾರರು ನಿಯಮಾವಳಿಗೆ ಅನುಸಾರವಾಗಿ ಇ-ಸ್ವತ್ತು ಉತಾರವನ್ನು ತಯಾರಿಸಿದ್ದು ಇರುತ್ತದೆ. ಸದರಿ ಆಸ್ತಿಗಳ ಮಾಲೀಕರು ಹಾಗೂ ಆಜು ಬಾಜೂದ ಆಸ್ತಿಗಳ ಮಾಲೀಕರನ್ನು ವಿಚಾರಿಸಿ ಸೂಕ್ತ ಅಳತೆ ಕಾರ್ಯಗಳನ್ನು ಮಾಡಿಕೊಂಡು ಪಂಚರ ಸಹಿಗಳನ್ನು ಪಡೆದುಕೊಂಡಿದ್ದು ಇ-ಸ್ವತ್ತು ಉತಾರವನ್ನು ತಯಾರಿಸಿರುತ್ತಾರೆ. ಸದರಿ ಆಸ್ತಿಗಳ ಉತಾರವನ್ನು ಸಹ ಮೂಲ ಮಾಲೀಕರಿಗೆ ನೀಡಿರುತ್ತಾರೆ. ಮತ್ತು ಈಗ ಸದರಿ ಆಸ್ತಿಗಳ ಮೂಲ ಮಾಲೀಕರು ಬೇರೆಯವರಿಗೆ ನೋಂದಣಿ ಖರೀದಿ ಪತ್ರ

ಮಾಡುವ ಮೂಲಕ ಸದರಿ ಆಸ್ತಿಗಳನ್ನು ಹಸ್ತಾಂತರ ಮಾಡಿದ್ದು ಈಗ ಸದರಿ ಆಸ್ತಿಗಳನ್ನು ಖರೀದಿದಾರರ ಹೆಸರುಗಳು ಸಹ ಸದರಿ ಆಸ್ತಿಗಳ ಇ-ಸ್ವತ್ತು ಉತಾರಗಳನ್ನು ದಾಖಲಾಗಿದ್ದು ಇರುತ್ತದೆ ಎಂದು ನಮೂದಿಸಿರುತ್ತಾರೆ.

5) ಎದುರುದಾರರುಗಳು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಬಾದಾಗ್ರಾಮದ ಆಸ್ತಿ ನಂ. 72 ಮತ್ತು 87ರ ಚೆಕ್ಕುಬಂದಿಯನ್ನು ತಿದ್ದುಪಡಿ ಮಾಡಲು ಅಧಿಕಾರ ಇರುವುದಿಲ್ಲ. ಮೇಲಾಧಿಕಾರಿಗಳ ಅಪ್ಪಣೆ ಪಡೆದು ತಿದ್ದುಪಡಿ ಮಾಡಿಕೊಡಲಾಗುವುದು ಎಂದು ನಮೂದಿಸಿರುತ್ತಾರೆ.

6) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ ರವರ ವರದಿ ಸ್ವೀಕರಿಸಿದ್ದು, ಸದರಿ ವರದಿ ಮತ್ತು ಲಗತ್ತು ದಾಖಲೆಗಳಂದ ದಿನಾಂಕ: 28/07/2017 ರಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಬಾಡ ಇವರು ಬಾಡ ಗ್ರಾಮದ ಆಸ್ತಿ ನಂ. 72ರ ಮತ್ತು 87ರ ಆಸ್ತಿಗಳ ಚೆಕಬಂದಿ ಮತ್ತು ಅಳತೆ ಬದಲಾವಣೆ ಮಾಡುವ ಕುರಿತು ಸಲಹೆ ಕೋರಿದ್ದು ಈಗಾಗಲೇ ಸದರಿ ಆಸ್ತಿಗಳು ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯಾಗಿದ್ದು ಬದಲಾವಣೆ ಮಾಡಲು ಪುನ: ಸರ್ಕಾರಕ್ಕೆ ಶುಲ್ಕ ಕಟ್ಟಿ ಸರಿಪಡಿಸಲು ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ತಿದ್ದುಪಡಿ ಮಾಡಬೇಕಿರುತ್ತದೆ ಎಂದು ದಿನಾಂಕ: 11/10/2017 ರಂದು ಮೇಲ್ ಮಾಡಿದ್ದಾಗಿ ನಮೂದಿಸಿರುತ್ತಾರೆ.

7) ಸದರಿ ಪ್ರಕರಣದಲ್ಲಿ 1ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ ಅನ್ವಯ ದಿ. 6.7.2015ರಿಂದ ಬಾಡ ಗ್ರಾಮದ ಪಿಡಿಓ ಆಗಿ ಕೆಲಸ ನಿರ್ವಹಿಸಿದ್ದು, ಸದರಿ ಸಮಯದಲ್ಲಿ ವಿ.ಪಿ.ಸಿ. ನಂ. 72 ಮತ್ತು 87ರ ಬಗ್ಗೆ ಇ-ಸ್ವತ್ತು ತಯಾರಿಸಲು ಫಿರ್ಯಾದಿದಾರರು ಅರ್ಜಿ ನೀಡಿದ್ದು ತಮ್ಮ ಅರ್ಜಿಯ ಜೊತೆಗೆ ಖರೀದಿ ಕ್ರಯ ಪತ್ರ ದಿ. 27.5.2016 ಹಾಗೂ ನೋಂದಾಣಿ ಪತ್ರಗಳನ್ನು ಸಲ್ಲಿಸಲಾಗಿದ್ದು ಸದರಿ ಕ್ರಯಪತ್ರಗಳನ್ವಯ ಗ್ರಾ.ಪಂ.ನ ಮನೆ ಸಂಖ್ಯೆ. 72 ಮತ್ತು 87ರ ಉತಾರೆಗಳನ್ನು

ನೀಡಿದ್ದು ಸದರಿ ಉತಾರೆಗಳನ್ವಯ ಇ-ಸ್ವತ್ತನ್ನು ದಾಖಲಿಸಬೇಕಾಗಿದ್ದು ಆ ಸಂಬಂಧ ಸ್ಥಳ ತನಿಖೆ ಮಾಡಿ ನಕ್ಷೆ ಮಾಲೀಕರ ಆಸ್ತಿಗೆ ಸಂಬಂಧಪಟ್ಟಂತೆ ದಾಖಲು ಮಾಡಿಕೊಂಡು ದಿ. 11.3.2016ರಂದು ಇ-ಸ್ವತ್ತು ಉತಾರೆಯನ್ನು ತಯಾರಿಸಿದ್ದು ಇರುತ್ತದೆ. ಇ-ಸ್ವತ್ತು ಉತಾರೆಯನ್ವಯ ಯಶ್ವಂತ್ ಬಿನ್ ಅಪ್ಪಾ ಕದಂ ಹಾಗೂ ಮೇಘ ಯಶ್ವಂತ ಕದಂ ಇವರಿಗೆ ಕೊಟ್ಟಿದ್ದು ಇರುತ್ತದೆ. ಯಶ್ವಂತ್ ದಿ. 27.5.2016ರಂದು ಯಶ್ವಂತ್ ಬಿನ್ ಅಪ್ಪಾ ಕದಂ ಇವರು ಆಸ್ತಿಯಾದ ವಿಪಿಸಿ ನಂ. 72ನ್ನು ಸುಭಾಶ್ ಶಂಕರ್ ವರುಟೆ ಮತ್ತು ಸದಾಶಿವ ಶಂಕರ ವರುಟೆ ಯವರಿಗೆ 27.5.2016ರಂದು ಉಪನೋಂದಾಣಿಧಿಕಾರಿ ಕಛೇರಿ, ಹುಕ್ಕೇರಿಯಲ್ಲಿ ನೋಂದಾಯಿಸಿರುವುದಾಗಿ ಅದೇ ರೀತಿ ಬಾಡ ಗ್ರಾಮದ ವಿಪಿಸಿ ನಂ. 82ನೇದ್ದನ್ನು ಸದರಿ ಮಾಲೀಕರಾದ ಮೇಘ ಯಶ್ವಂತ ಕದಂ ಇವರು ಸುಭಾಶ್ ಶಂಕರ್ ಹಾಗೂ ಸದಾಶಿವ ಶಂಕರ ವರುಟೆ ರವರಿಗೆ 27.5.2016ರಂದು ಖರೀದಿಗೆ ಕೊಟ್ಟಿದ್ದು ಇರುತ್ತದೆ. ದಿ. 4.11.2016ರಂದು ಸದರಿ ಆಸ್ತಿಯ ಸಂಬಂಧ ಗ್ರಾಮ ಸಭೆಯಲ್ಲಿ ಮಂಡನೆ ಮಾಡಿ ಆಸ್ತಿಗಳಿಗೆ ಉತಾರೆ ಪೂರೈಸಲು ದಾಖಲಿಸಿದ್ದು ಇರುತ್ತದೆ. ಆದರೆ ಯಶ್ವಂತ ಕದಂ ಹಾಗೂ ಮೇಘ ಕದಂ ಇವರು ಆಸ್ತಿ ಇ–ಉತಾರೆಯಲ್ಲಿ ಅದಲು ಬದಲಾದ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿದ್ದು ಸದರಿ ಅದಲು ಬದಲು ಆದ ಆಸ್ತಿಗೆ ಸರಿಪಡಿಸುವಂತೆ ಅರ್ಜಿ ನೀಡಿರುತ್ತಾರೆ. ಸದರಿ ಅರ್ಜಿಯನ್ನು 2ನೇ ಎದುರುದಾರರು ಪರಿಶೀಲಿಸಿ ಅದಲು ಬದಲಾದ ವಿಪಿಸಿ ನಂ. 72, 87 ನೇ ಇ-ಸ್ವತ್ತು ಉತಾರೆಯನ್ನು ಸರಿಪಡಿಸಲು ಕೋರಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ತಾ.ಪಂ. ಅಭಿವೃದ್ಧಿ ಅಧಿಕಾರಿಯವರು ಅದಲು ಬದಲಾದ ಇ-ಸ್ವತ್ತಿನ ಕುರಿತು ಯಾವುದೇ ಕ್ರಮವನ್ನು ಜರುಗಿಸದೆ ಸದರಿ ಆಸ್ತಿ ಸಂಬಂಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

8) ದಿ. 9.6.2017 ಹಾಗೂ ದಿ. 28.7.2017ರಂದು 1 ಮತ್ತು 2ನೇ ಎದುರುದಾರರು, 3ನೇ ಎದುರುದಾರರಿಗೆ ಮಾಡಿಕೊಂಡ ವಿನಂತಿಯನ್ನು 3ನೇ ಎದುರುದಾರರು

ನಿರ್ಲಕ್ಷ್ಯ ಮಾಡಿ ಇಲ್ಲಿಯವರೆಗೂ ಯಾವುದೇ ಕ್ರಮವನ್ನು ವಹಿಸಿರುವುದಿಲ್ಲ. ಸದರಿ ಅಂಶವನ್ನು ಗಮನಿಸಿದ್ದಲ್ಲಿ 1ನೇ ಎದುರುದಾರರು ಸ್ಥಳ ತನಿಖೆ ಮಾಡಿ ಆಸ್ತಿ ನೋಂದಾಣಿ ಕ್ರಯ ಪತ್ರಗಳನ್ನು ಪಡೆದುಕೊಂಡರೂ ಸಹಾ ತಂತ್ರಾಂಶದಲ್ಲಿ ಅಳವಡಿಸುವಾಗ ಆಸ್ತಿಗಳ ವಿವರಣೆಯನ್ನು ಬದಲಿಸಿ ಸಲ್ಲಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 72ನೇ ಆಸ್ತಿಯನ್ನು 87ಕ್ಕೆ , 87ನೇ ಆಸ್ತಿಯ ಚೆಕ್ಕುಬಂದಿಯನ್ನು 72ಕ್ಕೆ ಅಳವಡಿಸಿ ಬದಲಿಸಿರುವುದು ಕಂಡುಬರುತ್ತದೆ. ಈ ಅಂಶದಿಂದ ಫಿರ್ಯಾದಿದಾರರಿಗೆ ತೊಂದರೆ ಆಗಿರುವುದು ಮೇಲ್ನೋಟಕ್ಕೆ 1ನೇ ಎದುರುದಾರರು ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಸೂಕ್ತವಾಗಿ ವ್ಯವಹರಿಸಿದ್ದಲ್ಲಿ, ಫಿರ್ಯಾದಿದಾರರಿಗೆ ಯಾವುದೇ ತೊಂದರೆ ಉಂಟಾಗುತ್ತಿರಲಿಲ್ಲ. ಹಾಗೆಯೇ 3ನೇ ಎದುರುದಾರರು ತಮಗೆ ಸಲ್ಲಿಸಿದ 9.6.2017 ಮತ್ತು 28.7.2017ರ ಮನವಿಯನ್ನು ಪರಿಗಣಿಸಿ ಕ್ರಮ ಜರುಗಿಸಿದ್ದಲ್ಲಿ ಯಾವುದೇ ರೀತಿಯ ಫಿರ್ಯಾದಿದಾರರಿಗೆ ನಷ್ಟ ಉಂಟಾಗುತ್ತಿರಲಿಲ್ಲ.

9) ಆದರೆ 1 ಮತ್ತು 3ನೇ ಎದುರುದಾರರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ಹಾಗೂ ತಿದ್ದುಪಡಿಗೆ ಫಿರ್ಯಾದಿದಾರರು ಅರ್ಜಿ ಸಲ್ಲಿಸಿದಾಗಲೂ ಸಹಾ ಯಾವುದೇ ಕ್ರಮವನ್ನು ಜರುಗಿಸದೆ ಅಧಿಕಾರದ ದುರುಪಯೋಗ ಹಾಗೂ ದುರ್ನಡತೆ ಎಸಗಿರುವುದು ಕಂಡುಬರುತ್ತದೆ. ಇಲ್ಲಿಯವರೆಗೆ ಯಾವುದೇ ಕ್ರಮ ಜರುಗಿಸಿದ ಬಗ್ಗೆ ಮಾಹಿತಿ ಸಲ್ಲಿಸಿರುವುದಿಲ್ಲ. ಆದರೆ ಈಗ ಹೊಸದಾಗಿ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಪರಿಗಣಿಸಲಾಗುವುದು ಎಂದು 3ನೇ ಎದುರುದಾರರ ಜುಲೈ 2018ರ ದಿನಾಂಕ ರಹಿತ ಪತ್ರದಲ್ಲಿ ತಿಳಿಸಿರುವಂತೆ, ಯಾವುದೇ ಕ್ರಮ ಜರುಗಿಸದೆ ಹೋಗಿರುವುದು ಕಂಡುಬರುತ್ತದೆ.

10) 2ನೇ ಎದುರುದಾರರು ಸದರಿ ಇ-ಸ್ವತ್ತಿಗೆ ದಾಖಲು ಮಾಡಿಕೊಂಡಾಗ ಕೆಲಸ ನಿರ್ವಹಿಸಿರುವುದಿಲ್ಲವೆಂದು ಕಂಡುಬರುವುದರಿಂದ, 2ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆ ಒಪ್ಪಬಹುದಾಗಿದೆ. ಜೊತೆಗೆ 2ನೇ ಎದುರುದಾರರು ಫಿರ್ಯಾದಿದಾರರ ಸ್ವತ್ತಿನ ಅದಲು ಬದಲಿನ ಕುರಿತು ಸಲ್ಲಿಸಿದ ಅರ್ಜಿಗೆ ಸಂಬಂಧಪಟ್ಟಂತೆ, 3ನೇ

ಎದುರುದಾರರಿಗೆ ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಿರುವುದು ಕಂಡುಬರುವುದರಿಂದ 2ನೇ ಎದುರುದಾರರ ಕರ್ತವ್ಯಲೋಪ ಕಂಡುಬರುವುದಿಲ್ಲ.

11) ಆದ್ದರಿಂದ, 1 ಮತ್ತು 3ನೇ ಎದುರುದಾರರು ತಮ್ಮ ಕರ್ತವ್ಯದಲ್ಲಿ ಲೋಪ ಎಸಗಿರುವುದು ಇದರಿಂದ ಫಿರ್ಯಾದಿದಾರರಿಗೆ ಅನಾನುಕೂಲ ಹಾಗೂ ಮಾನಸಿಕ ಒತ್ತಡ ಮತ್ತು ಕಛೇರಿಯಿಂದ ಕಛೇರಿಗೆ ಅಲೆದಾಡುವ ಪ್ರಮೇಯ ಒದಗಿಬಂದಿದ್ದು ಎದುರುದಾರರು 1 ಮತ್ತು 3 ರ ಕರ್ತವ್ಯಲೋಪ ಎಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

12) ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ **1ನೇ ಎದುರುದಾರರಾದ** ಶ್ರೀ ಬಿ.ಐ. ಬಸ್ತವಾಡೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಾಡ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತು **3ನೇ ಎದುರುದಾರರಾದ** ಶ್ರೀ ಮಹಾದೇವ ಬಿರಾದಾರ ಪಾಟೀಲ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹುಕ್ಕೇರಿ ತಾಲ್ಲೂಕು ಪಂಚಾಯತ್, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

13) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

N. Anand 5/11

**[ನ್ಯಾಯಮೂರ್ತಿ ಎನ್.ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**